<u>ಅಸಲು ದಾವಾ ಸಂಖ್ಯೆ:- **157/2023**</u> ಪಿ.ಡಬ್ಲ್ಯೂ:- **1**

ದಿನಾಂಕಃ **04-01-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು:- **3** ನೇ ಪ್ರತಿವಾದಿ ಪರ ವಕೀಲರಿಂದ:-</u>

ನಮ್ಮ ತಂದೆಗೆ ನಾವು ಒಟ್ಟು 3 ಜನ ಮಕ್ಕಳು ಅಂದರೆ ನಾನು, ಭಾಗ್ಯ ಮತ್ತು ಗೀತಾ. ನನ್ನ ತಂಗಿ ಗೀತಾ 2003 ನೇ ಸಾಲಿನಲ್ಲಿ ತೀರಿಕೊಂಡಿರುತ್ತಾರೆ. ಗೀತಾಗೆ ಒಬ್ಬ ಹೆಣ್ಣು ಮಗಳು ಅಂದರೆ ಪೂಜಾ. ಪೂಜಾಳು ಮದುವೆಯ ಪೂರ್ವದಲ್ಲಿ ನನ್ನ ಹತ್ತಿರ ಇದ್ದರು ನಾನು ಪೂಜಾಳನ್ನು ಪುರದಕೇರಿ ಗ್ರಾಮದಲ್ಲಿರುವ ಪ್ರವೀಣ ಎಂಬುವವರಿಗೆ ಮದುವೆ ಮಾಡಿಕೊಟ್ಟಿದ್ದೆನು. ಪೂಜಾಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ದಾವಾ ಆಸ್ತಿಗಳು ಮೂಲತಹ ನನ್ನ ಅಜ್ಜರಾದ ವೀರಪ್ಪರವರಿಗೆ ಸೇರಿದ್ದು. ನಮ್ಮ ತಂದೆಯಾದ ಶಂಕ್ರಪ್ಪರವರಿಗೆ ದಾವಾ ಐಟಂ ನಂ.1 ಮತ್ತು 2 ರ ಆಸ್ತಿಗಳು ನಮ್ಮ ತಂದೆಯ ಭಾಗಾಂಶಕ್ಕೆ ಬಂದಿರುತ್ತದೆ. ಈ ದಾವೆಯನ್ನು ಸಲ್ಲಿಸಲು ಮಾಹಿತಿಯನ್ನು ವಕೀಲರಿಗೆ ನಾನೇ ಕೊಟ್ಟಿದ್ದೇನೆ. ದಾವಾ ಆಸ್ತಿಗಳಲ್ಲಿ ನನಗೆ ಭಾಗಾಂಶ ಕೋರಿ ದಾವೆಯನ್ನು ಸಲ್ಲಿಸಿದ್ದೇನೆ. 3 ನೇ ಪ್ರತಿವಾದಿ ಕತ್ತಿಗೆ ಗ್ರಾಮದ ವಾಸಿ. ದಾವಾ ಐಟಂ ನಂ.1 ರ ಆಸ್ತಿಯನ್ನು 1 ನೇ ಪ್ರತಿವಾದಿಯಾದ ನನ್ನ ತಂದೆ ನನ್ನ ಮತ್ತು 2 ನೇ ಪ್ರತಿವಾದಿಯ ಒಪ್ಪಿಗೆ ಮತ್ತು ಸಮ್ಮತಿಯನ್ನು ಪಡೆದುಕೊಂಡು 3 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ರ ಆಸ್ತಿಯ ಖಾತೆ ಈಗ 3 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ತಹಶೀಲ್ದಾರ್ ನ್ಯಾಯಾಲಯದಲ್ಲಿ ದಾವಾ ಐಟಂ.1 ರ ಆಸ್ತಿಯ ಖಾತೆಯನ್ನು 3 ನೇ ಪ್ರತಿವಾದಿಯ ಹೆಸರಿಗೆ ಮಾಡದಂತೆ ಕೋರಿ ಅರ್ಜಿಯನ್ನು ಸಲ್ಲಿಸಿದ್ದೆನು ಎಂದು ನುಡಿಯುತ್ತಾರೆ. ನಾನು ತಹಶೀಲ್ದಾರ್ ಕಚೇರಿಯಲ್ಲಿ ಸಲ್ಲಿಸಿದ ತಕರಾರು ಅರ್ಜಿಯ ನಕಲನ್ನು ಈ ದಾವೆಯಲ್ಲಿ ಹಾಜರುಪಡಿಸಿದ್ದೆನು. ತಕರಾರು ಅರ್ಜಿಯನ್ನು ಈ ದಾವೆಯಲ್ಲಿ ಸಲ್ಲಿಸದಿದ್ದರೂ ಸಹ

ಸಲ್ಲಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ತಹಶೀಲ್ದಾರ್ ಕಚೇರಿಗೆ ತಕರಾರನ್ನು ಸಲ್ಲಿಸಿದ ಬಗ್ಗೆ ದಾವಾ ಪತ್ರದಲ್ಲಿ ನಮೂದಾಗಿಲ್ಲ ಎಂದರೆ ಸರಿಯಲ್ಲ. ನಾನು ತಹಶೀಲ್ದಾರ್ ಕಚೇರಿಗೆ ಯಾವುದೇ ತಕರಾರನ್ನು ಸಲ್ಲಿಸಿದಿದ್ದರೂ ಸಹ ಸಲ್ಲಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.